

## ‘ಆರ್ಯನ್’ ಗೆಲ್ಲುವನೆಂದು...

ಶಿವರಾಜ್‌ಕುಮಾರ್ ನಟನೆಯ ‘ಆರ್ಯನ್’ ಸಿನಿಮಾ ಬಿಡುಗಡೆಗೆ ಮೊದಲೇ ಅಭಿಮಾನಿಗಳಲ್ಲಿ ಉತ್ಸಾಹ ಮೂಡಿಸಿದೆ. ಆಗಸ್ಟ್‌ನಲ್ಲಿ ತೆರೆ ಕಾಣಲಿರುವ ‘ಆರ್ಯನ್’ ಬಗೆಗಿನ ನಿರೀಕ್ಷೆಗಳು ಗರಿಗಟ್ಟಲಿಕ್ಕೆ ಮೂರು ಕಾರಣಗಳಿವೆ. ‘ಭಜರಂಗಿ’ ಯಶಸ್ಸಿನ ನಂತರ ತೆರೆ ಕಾಣುತ್ತಿರುವ ಶಿವಣ್ಣನ ಸಿನಿಮಾ ಎನ್ನುವುದು ಮೊದಲ ಕಾರಣ. ದಿವಂಗತ ಡಿ. ರಾಜೇಂದ್ರಬಾಬು ನಿರ್ದೇಶನದ ಕೊನೆಯ ಚಿತ್ರ ಹಾಗೂ ಬಹುದಿನಗಳ ನಂತರ ತೆರೆ ಕಾಣುತ್ತಿರುವ ನಟಿ ರಮ್ಯಾ ಅಭಿನಯದ ಸಿನಿಮಾ ಎನ್ನುವುದು ಉಳಿದೆರಡು ಕಾರಣಗಳು.

ರಾಜೇಂದ್ರಬಾಬು ಅವರ ನಿಧನದಿಂದಾಗಿ ಅಪೂರ್ಣವಾಗಿದ್ದ ‘ಆರ್ಯನ್’ ಚಿತ್ರವನ್ನು ನಿರ್ದೇಶಕ ಚಿ. ಗುರುದತ್ ಅವರು ಪೂರ್ಣಗೊಳಿಸಿದ್ದಾರೆ. ಕ್ರೀಡಾ ತರಬೇತುದಾರನ ಪಾತ್ರದಲ್ಲಿ ಶಿವರಾಜ್‌ಕುಮಾರ್ ಅವರು ನಟಿಸಿದ್ದು, ‘ತಮ್ಮ ವೃತ್ತಿಜೀವನದ ವಿಭಿನ್ನ ಚಿತ್ರಗಳಲ್ಲಿ ಇದೂ ಒಂದು’ ಎಂದು ಸ್ವತಃ ಶಿವರಾಜ್ ಅವರೇ ಹೇಳಿಕೊಂಡಿದ್ದಾರೆ.

ನಟಿ ರಮ್ಯಾ ಅವರ ಪಾಲಿಗೂ ‘ಆರ್ಯನ್’ ನಿರೀಕ್ಷೆಯ ಸಿನಿಮಾ. ಲೋಕಸಭಾ ಚುನಾವಣೆಯಲ್ಲಿನ ಸೋಲಿನ ನಂತರ ಕವಲುದಾರಿಯಲ್ಲಿರುವ ಅವರು ಮರಳಿ ಚಿತ್ರರಂಗದಲ್ಲಿ ತೊಡಗಿಕೊಳ್ಳಲಿಕ್ಕೆ ‘ಆರ್ಯನ್’ ಮುನ್ನುಡಿಯ ರೂಪದಲ್ಲಿ ಪರಿಣಮಿಸುವ ಸಾಧ್ಯತೆಯಿದೆ. ಈಗಾಗಲೇ ಸೂರಿ ನಿರ್ದೇಶನದ ‘ದೊಡ್ಮನೆ ಹುಡುಗ’ ಚಿತ್ರದಲ್ಲಿ ಪುನೀತ್‌ಗೆ ಜೋಡಿಯಾಗಿ ನಟಿಸಲು ರಮ್ಯಾ ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ‘ಆರ್ಯನ್’ ಸಿನಿಮಾ ಗೆದ್ದಲ್ಲಿ, ಆ ಗೆಲುವು ಅವರು ಪೂರ್ಣಪ್ರಮಾಣದಲ್ಲಿ ಅಭಿನಯದಲ್ಲಿ ತೊಡಗಿಕೊಳ್ಳಲು ಪ್ರೇರಣೆಯಾಗಬಹುದು.

ಅಂದಹಾಗೆ, ಶಿವಣ್ಣ, ರಮ್ಯಾ ಜೋಡಿಯ ಈ ಚಿತ್ರದಲ್ಲಿ ರಘು ಮುಖರ್ಜಿ ಹಾಗೂ ಅರ್ಚನಾ ಗುಪ್ತಾ ಕೂಡ ನಟಿಸಿದ್ದಾರೆ. ಧ್ರುವ ದಾಸ್ ಚಿತ್ರದ ನಿರ್ಮಾಪಕರು.

## ಡಿಮ್ಯಾಂಡ್‌ನಲ್ಲಿ ಹೃದಯದ ಹಾಡು

‘ನೀವು ಪ್ರೀತಿಸುತ್ತಿರುವ ಹುಡುಗಿಗೆ ಪ್ರಪೋಸ್ ಮಾಡಬೇಕಾದರೆ ನಮ್ಮ ಸಿನಿಮಾದ ಹೆಸರು ಹೇಳಿ’. ಹೀಗೆ ಹೇಳುವ ಮೂಲಕ ಯುವಕರನ್ನು ಸೆಳೆಯುವ ಪ್ರಚಾರ ತಂತ್ರದಲ್ಲಿ ತೊಡಗಿದೆ– ‘ಈ ದಿಲ್ ಹೇಳಿದೆ ನೀ ಬೇಕಂತ’ ಚಿತ್ರತಂಡ. ಯುವ ಪ್ರತಿಭೆಗಳೇ ಹೆಚ್ಚಾಗಿರುವ ‘ದಿಲ್’ ಬಳಗ ತನ್ನ ಸಿನಿಮಾದ ಬಗ್ಗೆ ಉತ್ಸುಕತೆಯಿಂದ ಮಾತನಾಡಲಿಕ್ಕೆ ಮತ್ತೊಂದು ಕಾರಣವೂ ಇದೆ. ಅದು, ಸಿನಿಮಾದ ಗೀತೆಗಳಿಗೆ ದೊರೆತಿರುವ ವಿಶೇಷ ಪ್ರತಿಕ್ರಿಯೆ.

ಕನ್ನಡ ಸಿನಿಮಾದ ಆಡಿಯೊ ಸೀಡಿಗಳಿಗೆ ಹೇಳಿಕೊಳ್ಳುವಂತಹ ಮಾರುಕಟ್ಟೆಯೇನೂ ಇಲ್ಲ. ಸಿನಿಮಾ ತೆರೆಕಂಡು ಗೆಲುವು ಪಡೆದರಷ್ಟೇ ಆ ಚಿತ್ರದ ಆಡಿಯೊ ಸೀಡಿಗಳು ಸ್ವಲ್ಪ ಮಟ್ಟಿಗೆ ಮಾರಾಟಗೊಳ್ಳುತ್ತವೆ. ಆದರೆ, ಸಿನಿಮಾ ತೆರೆ ಕಾಣುವ ಮೊದಲೇ ‘ದಿಲ್...’ ಚಿತ್ರದ ಗೀತೆಗಳ 25 ಸಾವಿರ ಸೀಡಿಗಳು ಮಾರಾಟಗೊಂಡಿವೆಯಂತೆ. ಈ ಗೀತ ಸಂಭ್ರಮವನ್ನು ಹಂಚಿಕೊಳ್ಳಲಿಕ್ಕೆಂದೇ ಸುದ್ದಿಗೋಷ್ಠಿ ನಡೆಸಿದ ಚಿತ್ರತಂಡ– ‘ಹಾಡುಗಳಿಗೆ ಸಿಕ್ಕಿರುವ ಮನ್ನಣೆ ಸಿನಿಮಾಕ್ಕೂ ದೊರೆಯುತ್ತದೆ’ ಎನ್ನುವ ನಿರೀಕ್ಷೆ ವ್ಯಕ್ತಪಡಿಸಿತು. ಆರ್ಯನ್ ಸತೀಶ್ ಸಂಗೀತದ ಗೀತೆಗಳಿಗೆ ಚಿತ್ರದ ನಿರ್ಮಾಪಕ ಶ್ರೀಧರ್ ಅವರೇ ಸಾಹಿತ್ಯ ರಚಿಸಿದ್ದಾರೆ. ನಿರ್ಮಾಪಕರು ಖುದ್ದು ಕರ್ನಾಟಕದಾದ್ಯಂತ ಓಡಾಡಿ, ಆಡಿಯೊ ಮಾರಾಟಕ್ಕೆ ಶ್ರಮಿಸಿದ್ದಾರಂತೆ.

ಕೆ.ಟಿ.ಎಂ. ಶ್ರೀನಿವಾಸ್ ಅವರ ಚೊಚ್ಚಿಲ ನಿರ್ದೇಶನದ ಈ ಚಿತ್ರದ ಮುಖ್ಯಪಾತ್ರಗಳಲ್ಲಿ ಅವಿನಾಶ್ ನರಸಿಂಹರಾಜು ಹಾಗೂ ಶ್ರೀಶ್ರುತಿ ನಟಿಸಿದ್ದಾರೆ. ಭರಪೂರ ಸಂಭಾಷಣೆಗಳಿರುವ ನಾಯಕನ ಪಾತ್ರ ಅವಿನಾಶ್ ಅವರಿಗೆ ಖುಷಿ ಕೊಟ್ಟಿದೆ. ಈ ಪಾತ್ರದ ನಿರ್ವಹಣೆಗಾಗಿ ಅವರು ಸಾಕಷ್ಟು ಹೋಂವರ್ಕ್ ಮಾಡಿದ್ದರಂತೆ. ನಾಯಕನನ್ನು ಗೋಳು ಹೊಯ್ದುಕೊಳ್ಳುವ ಪಾತ್ರ ಶ್ರುತಿ ಅವರಿಗೂ ಇಷ್ಟವಾಗಿದೆ.

■ ರಘು

